ಸುವರ್ಣ ಸಮುಚ್ಚಯ ಭವನ ನಿರ್ಮಾಣ

193(591); ಶ್ರೀ ಬೋಪಯ್ಯ ಕೆ.ಜಿ. (ವಿರಾಜಪೇಟೆ)

ಅ) ಮಡಿಕೇರಿ ನಗರದಲ್ಲಿ ಸುವರ್ಣ ಸಮುಚ್ಚಾಯ ಭವನ ನಿರ್ಮಾಣದ ಕಾಮಗಾರಿ ಇನ್ನೂ ಪ್ರಾರಂಭವಾಗದಿರಲು ಕಾರಣವೇನು;

ಆ) ಇದಕ್ಕಾಗಿ ಎಷ್ಟು ಅನುದಾನವನ್ನು ಮೀಸಲಿಡಲಾಗಿದೆ (ವಿವರ ಒದಗಿಸುವುದು)?

ಶ್ರೀಮತಿ ಉಮಾಶ್ರೀ (ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ) ಮಾನ್ಯ ಮುಖ್ಯ ವಾಸ್ತು ಶಿಲ್ಪಿಗಳು, ಕರ್ನಾಟಕ ಸರ್ಕಾರ, ಬೆಂಗಳೂರುರವರು ನೀಡಿದ ಡ್ರಾಯಿಂಗ್ ಸಂಖ್ಯೆ:11376/1 ಮತ್ತು 11376/2ರಲ್ಲಿ ಆಡಿಟೋರಿಯಂ, ಆರ್ಟ್‌ಗ್ಯಾಲರಿ, ಆಡಳಿತ ಕಚೇರಿ ಮತ್ತು ವಾಚನಾಲಯ ನಿರ್ಮಾಣಕ್ಕಾಗಿ ಅನುವು ಮಾಡಿಕೊಂಡು ರೂ. 107.00 ಲಕ್ಷಗಳಿಗೆ ಪ್ರಸ್ತಾವನೆ ಸಲ್ಲಿಕೆಯಾಗಿದ್ದು, ಸರ್ಕಾರದ ಆದೇಶ ಸಂ:ಸಂಕಇ:471ಕಸಧ 2005 ದಿ:15.03.2006 ಹಾಗೂ 18.12.2006ರಲ್ಲಿ ರೂ. 150.00 ಲಕ್ಷಗಳಿಗೆ ಆಡಳಿತಾತಕ್ಕ ಅನುಮೋದನೆ ನೀಡಿ ರೂ. 107.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿರುತ್ತದೆ. ಸ್ಥಳದ ಅಡಚಣೆಯಿಂದ ಟೆಂಡರ್ ಕರೆದು ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗದೆ ಕೆಲಸವು ಸ್ಥಗಿತವಾಗಿದ್ದು, ಹಣವು ಜಿಲ್ಲಾಧಿಕಾರಿಗಳ ಖಾತೆಯಲ್ಲಿ ಜಮೆ ಮಾಡಲಾಗಿರುತ್ತದೆ.

ಈ ಹಿಂದೆ ತಯಾರಿಸಲಾದ ರೂ. 150.00 ಲಕ್ಷ ಅಂದಾಜು ಪಟ್ಟಿಯು 6 ವರ್ಷಗಳ ಹಿಂದಿನ ದರವಾಗಿದ್ದು ಕಾಮಗಾರಿಯನ್ನು ಕೈಗೆತ್ತಿಕೊಳ್ಳುವ ಸಂಬಂಧ 2011–12ನೇ ಸಾಲಿನ ದರದಂತೆ ಪರಿಷ್ಕೃತ ಅಂದಾಜು ವೆಚ್ಚ

260.00 ಲಕ್ಷ ವೆಚ್ಚಪಟ್ಟಿಗೆ ಸರ್ಕಾರದ ಆದೇಶ ಸಂಖ್ಯೆ:ಕಸಂವಾಪ್ರ:609: ಕಸಧ 2012 ದಿನಾಂಕ: 23.07.2012ರಲ್ಲಿ ಪರಿಷ್ಕೃತ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.

ಕನ್ನಡ ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳು ದಿನಾಂಕ: 30.04.2012ರಂದು ಕೊಡಗು ಜಿಲ್ಲೆಗೆ ಭೇಟಿ ನೀಡಿ ಸೂಚಿಸಿದಂತೆ ಜಿಲ್ಲಾ ರಂಗಮಂದಿರ ಮತ್ತು ಸುವರ್ಣ ಸಮುಚ್ಚಯ ಎರಡೂ ಒಟ್ಟಾಗಿ ನಿರ್ಮಿಸಲು ಚರ್ಚಿಸಿದಂತೆ ಜಿಲ್ಲಾಧಿಕಾರಿಗಳು ಒಪ್ಪಿರುತ್ತಾರೆ. ಈ ಸಂಬಂಧ ಬೇಸ್‌ಮೆಂಟ್‌ನಲ್ಲಿ ಕಾರ್ ಪಾರ್ಕಿಂಗ್, ಕೊಡವ ಅಕಾಡೆಮಿ ಕಚೇರಿ, ಲೈಬ್ರರಿ ಮತ್ತು ಮೀಟಿಂಗ್ ಹಾಲ್ ಇರುತ್ತದೆ. ನೆಲಮಹಡಿಯಲ್ಲಿ ಕನ್ನಡ ಸಂಸ್ಕೃತಿ ಇಲಾಖೆ ಕಚೇರಿ, ಅರೆಭಾಷಾ ಅಕಾಡೆಮಿ ಕಚೇರಿ, ಮ್ಯುಸಿಯಂ, ಆರ್ಟ್ ಗ್ಯಾಲರಿ ಮತ್ತು ಲಾಂಚ್ ಇರುತ್ತದೆ. ಮೊದಲನೆ ಮಹಡಿಯಲ್ಲಿ ಗ್ರೀನ್ ರೂಂ ಒಳಗೊಂಡಂತೆ ವಿಶಾಲವಾದ ಆಡಿಟೋರಿಯಂ ಇರುತ್ತದೆ. ಹಾಗೂ ಎರಡನೇ ಮಹಡಿಯಲ್ಲಿ ಡಾರ್ಮೆಟರಿಯನ್ನು ಅಳವಡಿಸಲಾಗುತ್ತದೆ. ಹೀಗಾಗಿ ಒಟ್ಟು ಕಟ್ಟಡದ ವಿಸ್ತರಣೆಯು 3,323 ಚ.ಮೀ ಆಗಿರುತ್ತದೆ. ಈ ಸಂಬಂಧ ಮುಖ್ಯ ಪ್ರಧಾನ ವಾಸ್ತುಶಿಲ್ಪಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು ಇವರು 2013–14ನೇ ಸಾಲಿನ ದರಪಟ್ಟಿ ಪರಿಷ್ಕರಿಸಲು ತಯಾರಿಸಿದ ರೂ. 400 ಲಕ್ಷಗಳ ಅಂದಾಜು ಪಟ್ಟಿ ಸಲ್ಲಿಸಿರುತ್ತಾರೆ. ಈ ಸಂಬಂಧ ಸರ್ಕಾರದ ಆದೇಶ ಸಂ: ಕಸಂವಾಪ್ರ:609:ಕಸಧ2012 ದಿ: 24.05.2013ರಲ್ಲಿ ಪರಿಷ್ಕೃತ ರೂ. 400 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಜಿಲ್ಲಾಧಿಕಾರಿಗಳು ಕೊಡಗು ಜಿಲ್ಲೆ ಇವರು ಟೆಂಡರ್ ಪ್ರಕ್ರಿಯೆಯನ್ನು ಆರಂಭಿಸಲು ಕೊರತೆಯಿರುವ 100.00 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಕೋರಿದ್ದು ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) 2014–15ನೇ ಸಾಲಿನ ಆಯವ್ಯಯದಲ್ಲಿ ಮಡಿಕೇರಿ ಜಿಲ್ಲಾರಂಗ ಮಂದಿರಕ್ಕೆ ರೂ. 150.00 ಲಕ್ಷಗಳನ್ನು ಒದಗಿಸಲಾಗಿದೆ.

ಸಾಹಿತ್ಯ ಅಕಾಡೆಮಿಗಳಿಗೆ ಅನುದಾನ

194(592); ಶ್ರೀ ಬೋಪಯ್ಯ ಕೆ.ಜಿ. (ವಿರಾಜಪೇಟೆ)

ಅ) ರಾಜ್ಯದಲ್ಲಿ ಒಟ್ಟು ಎಷ್ಟು ಸಾಹಿತ್ಯ ಅಕಾಡೆಮಿಗಳು ಇವೆ (ವಿವರ ಒದಗಿಸುವುದು);

ಆ) ಕಳೆದ 3 ವರ್ಷಗಳಲ್ಲಿ ಈ ಅಕಾಡೆಮಿಗಳಿಗೆ ಎಷ್ಟು ಅನುದಾನ ಬಿಡುಗಡೆಯಾಗಿದೆ (ಪ್ರತ್ಯೇಕ ವಿವರ ಒದಗಿಸುವುದು);

ಇ) ಈ ಅವಧಿಯಲ್ಲಿ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಮತ್ತು ಕರ್ನಾಟಕ ಸಾಹಿತ್ಯ ಅಕಾಡೆಮಿಗಳಿಗೆ ಬಿಡುಗಡೆಯಾದ ಅನುದಾನ ಎಷ್ಟು;

ಈ) ಎಲ್ಲಾ ಅನುದಾನವನ್ನು ಆಯಾ ವರ್ಷ ಖರ್ಚು ಮಾಡಲಾಗಿದೆಯೇ; ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು (ಪ್ರತ್ಯೇಕವಾದ ವಿವರ ಒದಗಿಸುವುದು)?

ಶ್ರೀಮತಿ ಉಮಾಶ್ರೀ (ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ) ರಾಜ್ಯದಲ್ಲಿ 6 ಸಾಹಿತ್ಯ ಅಕಾಡೆಮಿಗಳಿವೆ.

1. ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು
2. ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ
3. ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು
4. ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ, ಮಂಗಳೂರು